ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಅ) ಹೌದು, ಜಾರಿಯಲ್ಲಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಮನರಂಜನಾ ತೆರಿಗೆ ಹೊರತುಪಡಿಸಿ ಬೇರೆ ವೆಚ್ಚಗಳನ್ನು ಸಂಗ್ರಹಿಸುವುದಿಲ್ಲ.

ಈ) 2005–06ನೇ ಆಯವ್ಯಯ ಅಧಿವೇಶನದ ಭಾಷಣದಲ್ಲಿ ಸರ್ಕಸ್ ಕಂಪನಿಗಳಿಗೆ ಮನರಂಜನಾ ತೆರಿಗೆಯನ್ನು ವಿನಾಯಿತಿಗೊಳಿಸಲು ಪ್ರಸ್ತಾಪಿಸಲಾಗಿದೆ.

2093 (2615) ಶ್ರೀ ಜಗದೀಶ್ (ವಿರುಪಾಕ್ಷಿ) ಸಿ. ಮೆಟಗುಡ್ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಬಳಿಯ ಬೆಳಗಾಂದಿಂದ ಲೋಕಾಪೂರ್‌ಗೆ ಹೋಗುವ ರಸ್ತೆ ಕಾಮಗಾರಿಯನ್ನು ಯಾವ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ;

ಆ) ಈ ಕಾಮಗಾರಿಯನ್ನು ಯಾವ ಹಣದಿಂದ ನಿರ್ವಹಿಸಲಾಗುವುದು;

ಇ) ಇದಕ್ಕೆ ನಿಗದಿಪಡಿಸಿರುವ ಹಣ ಎಷ್ಟು ಹಾಗೂ ಹಾಲಿ ಮಂಜೂರು ಮಾಡಿರುವ ಹಣವೆಷ್ಟು; ಈ ರಸ್ತೆಯ ಉದ್ದ ಎಷ್ಟು ಕಿ.ಮೀ.ಗಳು ಹಾಗೂ ಇದರ ಅಂದಾಜು ವೆಚ್ಚವೆಷ್ಟು;

ಈ) ಈ ರಸ್ತೆ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ಎಷ್ಟು ಮೊತ್ತಕ್ಕೆ ನೀಡಲಾಗಿದೆ ಹಾಗೂ ಟೆಂಡರ್ ಮೂಲಕ ಗುತ್ತಿಗೆ ವಹಿಸಲಾಗಿದೆಯೇ (ವಿವರ ನೀಡುವುದು);

ಉ) ಸದರಿ ರಸ್ತೆಗಳಲ್ಲಿ ಬರುವ ಸೇತುವೆಗಳ ಸಂಖ್ಯೆ ಎಷ್ಟು ಹಾಗೂ ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ;

ಊ) ಇದಕ್ಕೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳಗಾಂದಿಂದ ಲೋಕಾಪೂರ್‌ಗೆ ಹೋಗುವ ರಸ್ತೆಯು ಕಾಂಟ್ರಾಕ್ಟ್ ಪ್ಯಾಕೇಜ್ U8(ಬೆಳಗಾಂನಿಂದ ಹುನಗುಂದ ರಸ್ತೆ ಅಭಿವೃದ್ಧಿ) ಭಾಗವಾಗಿದ್ದು, ಈ ಕಾಮಗಾರಿಯನ್ನು ವಿಶ್ವಬ್ಯಾಂಕ್ ಸಾಲದ ನೆರವಿನ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದೆ.

ಆ) ವಿಶ್ವಬ್ಯಾಂಕ್ ಸಾಲದ ಯೋಜನೆಯಡಿಯಲ್ಲಿ ಕೈಗೊಂಡಿರುವ ಒಟ್ಟು ಕಾಮಗಾರಿಗಳ ವೆಚ್ಚದಲ್ಲಿ ಶೇಕಡ 20 ರಷ್ಟು ರಾಜ್ಯ ಸರ್ಕಾರದ ಭಾಗವಿದ್ದು, ಉಳಿಕೆ 80ರಷ್ಟು ವಿಶ್ವಬ್ಯಾಂಕ್ ಸಾಲದ ರೂಪದಲ್ಲಿ ಇರುತ್ತದೆ.

ಇ) ಬೆಳಗಾಂನಿಂದ ಹುನಗುಂದ್ ರಸ್ತೆ ಕಾಮಗಾರಿಯು 171 ಕಿಮೀ. ಉದ್ದವಿದ್ದು, ಇದನ್ನು ಗುತ್ತಿಗೆ ಆಧಾರದ ಮೇರೆಗೆ ರೂ.280.93 ಕೋಟಿಗಳಿಗೆ ವಹಿಸಿಕೊಟ್ಟಿದ್ದು ಫೇಬ್ರವರಿ 2005ರ ಅಂತ್ಯದವರೆಗೆ ರೂ.70.50 ಕೋಟಿಗಳು ವೆಚ್ಚವಾಗಿರುತ್ತವೆ.

ಈ) ಈ ರಸ್ತೆ ಕಾಮಗಾರಿಯನ್ನು ಮೆ:ಕೆ.ಎಂ.ಸಿ.ಕನ್ಸ್ಟ್ರಕ್ಷನ್ಸ್ ಲಿ.ಹೈದರಾಬಾದ್ ಇವರಿಗೆ ವಿಶ್ವಬ್ಯಾಂಕ್ ನಿಯಮಾವಳಿ ಪ್ರಕಾರ ಅಂತರ ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್ ಆಧಾರದ ಮೇರೆಗೆ ನಿಡಲಾಗಿದೆ.

ಉ) ಈ ರಸ್ತೆಯಲ್ಲಿ ಒಟ್ಟು 42 ಸೇತುವೆಗಳು ಬರುತ್ತವೆ. ಸದರಿ ಕಾಮಗಾರಿಯನ್ನು ಮಾರ್ಚ್ 2006ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಊ) ಮಾರ್ಚ್ 2006 ರಲ್ಲಿ ಪೂರ್ಣಗೊಳಿಸುವ ಕಾಲಮಿತಿ ನಿಗದಿಪಡಿಸಲಾಗಿದೆ.

2094 (2269) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷ (ಈ ವರ್ಷದ 31.1.2005 ರವರೆಗೆ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಗಾಲ ಪರಿಹಾರಕ್ಕೆ ಬಂದ ಹಣ ಎಷ್ಟು; ಹಾಗೂ ಧಾನ್ಯವೆಷ್ಟು (ವರ್ಷವಾರು ವಿವರ ನಿಡುವುದು):

ಆ) ಈ ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು (ವರ್ಷವಾರು ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ (31.1.2005ರವರೆಗೆ) ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

ವರ್ಷ	ಸಿ.ಆರ್.ಎಫ್.	ಎನ್.ಸಿ.ಸಿ.ಎಫ್	ಒಟ್ಟು
2002–03	6166.00	19688.00	25854.00
2003–04	6474.00	31647.00	38121.00
2004–05 (31.1.05)	6798.00	1448.00	8246.00
ಒಟ್ಟು	**19438.00**	**52783.00**	**72221.00**

ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿರುವ ಧಾನ್ಯದ ವಿವರ ಈ ಕೆಳಗಿನಂತಿದೆ.

	ವರ್ಷ	ಬಿಡುಗಡೆಯಾದ ಆಹಾರಧಾನ್ಯ (ಮೆ.ಟನ್‌ಗಳಲ್ಲಿ)	
1.	2002–03	–	5,30,000
2.	2003–04	–	6,79,750
3.	2004–05 (31.1.05)	–	2,39,620